**ಪಿ.ಡಬ್ಲ್ಯೂ: 1**

**ದಿನಾಂಕಃ 22-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ.ಕೆ ವಕೀಲರಿಂದಃ**

ನ್ಯಾಯಾಯದಲ್ಲಿ ಕುಳಿತ್ತಿರುವ 2 ನೇ ಪ್ರತಿವಾದಿ ನನ್ನ ತಾಯಿ ಇರುತ್ತಾಳೆ. ಈ ಪ್ರಕರಣವನ್ನು ದಾಖಲಿಸುವ ಸಮಯದಲ್ಲಿ ಸಿಂದುಬಾಯಿ ಜೀವಂತ ಇದ್ದಳು. ನಿಂಗಪ್ಪ ತೀರಿಕೊಂಡು ಎಷ್ಟು ವರ್ಷಗಳು ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ 2 ನೇ ಪ್ರತಿವಾದಿ ಈ ಪ್ರಕರಣದಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುವ ನಮ್ಮ ವಕೀಲರು ನನಗೆ ಹೇಳಿರುತ್ತಾರೆ. ನಮ್ಮ ತಂದೆ ನಿಂಗಪ್ಪ ಅಲ್ಲ, ಭಗವಾನ ಕುಂಬಾರ ಇರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಚಿಕ್ಕವಳು ಇದ್ದೆನು ಎಂದು ನುಡಿಯುತ್ತಾಳೆ. ಸದರಿ ಸಂಗತಿ ನನ್ನ ತಾಯಿಗೆ ಗೊತ್ತಿರುತ್ತದೆ. ನನ್ನ ತಾಯಿ ನ್ಯಾಯಾಲಯದಲ್ಲಿ ಪ್ರತಿವಾದ ಪತ್ರ ಸಲ್ಲಿಸಿ ನನ್ನ ಮೊದಲನೆ ಗಂಡ ಭಗವಾನ ಕುಂಬಾರ ಆತನ ಮಗಳೆ ನಾನು ಎಂದು ಹೇಳಿರುತ್ತಾಳೆ ಎಂದರೆ ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿ ಮೃತ ಸಿಂದುಬಾಯಿ ನಿಂಗಪ್ಪನ ಮೊದಲನೆಯ ಹೆಂಡತಿ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನ ಊರು ಶಾಹಾಪೂರ ತಾಲೂಕಿನ ಮಲ್ಲಬಾಯಿ ಇರುತ್ತದೆ. ನಾನು ನನ್ನ ಗಂಡನ ಜೊತೆ ಮಲ್ಲಬಾಯಿಯಲ್ಲಿ ಇರುತ್ತೇನೆ. 1, 3, ಮತ್ತು 4 ನೇ ಪ್ರತಿವಾದಿಯರೂ ನನಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸದರಿಯವರ ಮೇಲೆ ಆಸ್ತಿಗೊಸ್ಕರ ನಾನು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಕಬಳಿಸಬೇಕೆನ್ನುವ ಉದ್ದೇಶದಿಂದ ಸುಳ್ಳು ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**02.** ದಾವಾ ಐಟಂ ನಂ.1 ಮತ್ತು 2 ಸರ್ವೆ ನಂ.30/2 ಮತ್ತು 30/3 ಜಮೀನು ಜಮೀನುಗಳು 4 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಆಗಿರುತ್ತವೆ ಎಂದರೆ ನಿಜ. 4 ನೇ ಪ್ರತಿವಾದಿಯೂ ಸೊಲ್ಲಾಪೂರದಲ್ಲಿ ಪೋಲೀಸ ಇರುತ್ತಾನೆ ಎಂದರೆ ನಿಜ. ನಿಂಗಪ್ಪನಿಗೆ ಇಬ್ಬರು

ಅಣ್ಣ-ತಮ್ಮಂದಿರು ಇದ್ದರು. ಆತನ ಹೆಸರು ಪರಮಣ್ಣ ಎಂದರೆ ಸರಿ. ನಿಂಗಪ್ಪನಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ನಿಂಗಪ್ಪ ಮತ್ತು ಪರಮಣ್ಣನ ಇವರ ತಂದೆ ಹೆಸರು ನನಗೆ ಗೊತ್ತಿರುವುದಿಲ್ಲ. ನಾಲ್ಕು ಜನ ಅಕ್ಕ-ತಂಗಿಯರ ಹೆಸರುಗಳು ಬಸಮ್ಮ, ಸಿದ್ದಮ್ಮ, ಎಲ್ಲಮ್ಮ ಮತ್ತು ಮಲ್ಲಮ್ಮ ಎಂದು ಇರುತ್ತವೆ. ಸದರಿಯವರ ಪೈಕಿ ಬಸಮ್ಮ ಇವಳು ತೀರಿಕೊಂಡಿರುತ್ತಾಳೆ.

**03.** ಸರ್ವೆ ನಂ.214/2 ವಿಸ್ತೀರ್ಣ 03 ಎಕರೆ ಜಮೀನು ಹಣಮಂತ್ರಾಯ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸಾಕ್ಷಿಯು ಸುಮ್ಮನೆ ನಿಲ್ಲುತ್ತಾರೆ. ಸದರಿ ಜಮೀನು ಹಿರಿಯವರ ಆಸ್ತಿ ಅಲ್ಲ, ಹಣಮಂತ್ರಾಯನ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ.7 ರಿಂದ 10 ನೇ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸೋಲ್ಲಾಪೂರದಲ್ಲಿ ಇರುವ ದಾವಾ ಐಟಂ ನಂ.7 ನೇ ಆಸ್ತಿ ಶ್ರೀನಿವಾಸ ಆಚಾರ್ಯ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸೋಲ್ಲಾಪೂರದಲ್ಲಿ ಇರುವ ದಾವಾ ಐಟಂ ನಂ.7 ರಿಂದ 10 ನೇ ಆಸ್ತಿಗಳು ಹಿರಿಯರ ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನಿಂಗಪ್ಪ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಯಾದ ನಿಂಗಪ್ಪನ ಹೆಸರಿನಲಿ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ನಾಲ್ಕು ಆಸ್ತಿಗಳು ನಿಂಗಪ್ಪನ ಹೆಸರಿನಲ್ಲಿ ಇರುತ್ತವೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಗಳ ಉದ್ದಳತೆ ಮತ್ತು ಚಕ್ಕಬಂದಿ ಯಾವುದನ್ನು ತೋರಿಸಿಲ್ಲ ಎಂದರೆ ಸರಿಯಲ್ಲ.

**04.** ದಾವಾ ಐಟಂ ನಂ.7 ರ ಆಸ್ತಿಯು ಎಲ್ಲಿ ಬರುತ್ತದೆ ಅದರ ವಾರ್ಡ ನಂಬರ ಮತ್ತು ಉದ್ದಳತೆ ನಿಖರವಾಗಿ ಬರೆಸಿಲ್ಲ ಎಂದರೆ ಸಾಕ್ಷಿ ಸಮ್ಮನೆ ನಿಲ್ಲುತ್ತಾರೆ. ದಾವಾ ಐಟಂ ನಂ.8 ಆಸ್ತಿಯು ಶಾಂತಾಬಾಯಿ ಅಂದರೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ದಾವಾ ಐಟಂ ನಂ.8 ನೇ ಆಸ್ತಿಯು ಹಣುವಂತ್ರಾಯ ಹೆಸರಿನಲ್ಲಿ ಖರೀದಿಸಿದ ಆಸ್ತಿ ಎಂದರೆ ಸಾಕ್ಷಿ ಸಮ್ಮನೆ ನಿಲ್ಲುತ್ತಾಳೆ. ನಿಂಗಪ್ಪನ ಹೆಸರಿನಲ್ಲಿ ಇರುವುದು ಕೇವಲ ಹಳೆ ಮನೆ ಎಂದರೆ ಸರಿಯಲ್ಲ, ಸಾಕ್ಷಿ ನನಗೆ

ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳು ಅಲ್ಲ ಎಂದರೆ ಸಾಕ್ಷಿಯು ಸುಮ್ಮನೆ ನಿಲ್ಲುತ್ತಾರೆ.

**05.** ಸರ್ವೆ ನಂ.88/1 ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.12 ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂ.43/4 ಜಮೀನು ಸಿಂದುಬಾಯಿ 3 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನನಗೂ ನಿಂಗಪ್ಪನಿಗೂ ಯಾವುದೇ ಸಬಂಧ ಇರುವುದಿಲ್ಲ ನನಗೆ ಯಾವುದೇ ಆಸ್ತಿ ಬರುವುದಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಪ್ರತಿವಾದಿಯರಿಗೂ ನಾನು ಯಾವುದೇ ರೀತಿಯಿಂದ ಸಂಬಂಧ ಇಲ್ಲದೇ ಇದ್ದರೂ ಆಸ್ತಿ ಕಬಳಿಸಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕಾಗದ ಪತ್ರಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಭಗವಾನ ಕುಂಬಾರ ಈತನ ಮಗಳು ಇದುದ್ದರಿಂದ ನನಗೆ ದಾವಾ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: 10 ರಿಂದ 13 ನೇ ಪ್ರತಿವಾದಿ ಪರ ಶ್ರೀ ವಿ.ಎಸ್.ಬಿ ವಕೀಲರಿಂದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.